**ಕರ್ನಾಟಕ ಸರ್ಕಾರ**

ಸಂಖ್ಯೆ: ಟಿಟಿಇ/06/ಇಎಫ್ಎಸ್/2021-22

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ.
ಅರಮನೆರಸ್ತೆ, ಬೆಂಗಳೂರು,
ದಿನಾಂಕ:29/09/2021

**ಜ್ಞಾಪನ**

ವಿಷಯ:- 2021ರ ಅಕ್ಟೋಬರ್ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗೆ ಬೇಕಾಗಿರುವ ಲೇಖನ ಸಾಮಗ್ರಿಗಳ ಪೂರೈಕೆ ಕೆಲಸಕ್ಕಾಗಿ ನೌಕರರನ್ನು ನಿಯೋಜನೆ ಮಾಡಿರುವ ಬಗ್ಗೆ.

ಉಲ್ಲೇಖ:-1)ಈ ಕಛೇರಿ ಸುತ್ತೋಲೆ ಸಂಖ್ಯೆ: ಟಿಟಿಇ/06/ಇಎಫ್ಎಸ್/2021-22 ದಿನಾಂಕ:29/07/2021

******

2021ರ ಅಕ್ಟೋಬರ್ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆ ನಡೆಸಲು ಬೇಕಾಗುವ ಅಗತ್ಯ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳ ಬೇಡಿಕೆಯನ್ನು ಕಳುಹಿಸಿಕೊಡುವಂತೆ ಉಲ್ಲೇಖ (1) ರ ಪತ್ರದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳಿಂದ ಕೋರಲಾಗಿತ್ತು. ಅದರಂತೆ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಿಂದ ಬೇಡಿಕೆ ಸಲ್ಲಿಸಿರುತ್ತಾರೆ. ಪ್ರಯುಕ್ತ, ಅವಶ್ಯಕತೆ ಇರುವ ಮುಖ್ಯ/ಪ್ರಾಯೋಗಿಕ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳನ್ನು ಸಂಬಂಧಪಟ್ಟ ನೋಡಲ್ ಸೆಂಟರ್‌ಗಳ ಮೂಲಕ ಎಲ್ಲಾ ಸಂಸ್ಥೆಗಳಿಗೆ ಹಂತ ಹಂತವಾಗಿ ಕಳುಹಿಸಿ ಕೊಡಬೇಕಾಗಿರುತ್ತದೆ. ಇಎಫ್ಎಸ್ ವಿಭಾಗದ ಪರೀಕ್ಷಾ ಪೂರ್ವ ಕೆಲಸಗಳಾದ 2021ರ ಅಕ್ಟೋಬರ್ ಡಿಪ್ಲೋಮೊ ಸೆಮಿಸ್ಟರ್ ಪರೀಕ್ಷೆ ನಡೆಸಲು ಬೇಕಾಗುವ ಅಗತ್ಯ ಉತ್ತರ ಪತ್ರಿಕೆಗಳು ಮತ್ತು ಲೇಖನ ಸಾಮಗ್ರಿಗಳನ್ನು ಸಂಸ್ಥೆವಾರು, ಜಿಲ್ಲಾವಾರು, ನೋಡಲ್ ಸೆಂಟರ್‌ವಾರು ವಿಂಗಡಿಸಿ, ಬಂಡಲ್ ಮಾಡುವ ಕಾರ್ಯನಿರ್ವಹಿಸಲು ದಿನಾಂಕ: 01/10/2021 ರಿಂದ ಮುಂದಿನ ಆದೇಶದವರೆವೆಗೂ ಈ ಕೆಳಕಂಡ ಸಿಬ್ಬಂದಿಯವರನ್ನು ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾಗಿದೆ. ಸದರಿ ಅವಧಿಯನ್ನು **"ಅನ್ಯ ಕರ್ತವ್ಯದ ಅವಧಿ"**(ಓಓಡಿ) ಎಂದು ಪರಿಗಣಿಸಲಾಗುವುದು. ಸದರಿಯವರು ನಿಯಮಾನುಸಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

| ಕ್ರ.ಸಂ | ಹೆಸರು ಮತ್ತು ಪದನಾಮ | ಸಂಸ್ಥೆಯ ಹೆಸರು |
|---|---|---|
| 01 | ಜಾರ್ಜ್ ವಿಲಿಯಮ್ಸ್, ಯಾಂತ್ರಿಕರು | ಕೆ.ವಿ.ಟಿ.ಪಾಲಿಟೆಕ್ನಿಕ್,ಚಿಕ್ಕಬಳ್ಳಾಪುರ |
| 02 | ರಂಗಸ್ವಾಮಿ ಕೆ.ಆರ್. ಸಹಾಯಕರು | ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು. |
| 03 | ಪ್ರವೀಣ್‌ಕುಮಾರ್ ಹೆಚ್, ಸಹಾಯಕರು | ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು. |
| 04 | ಶಿವಣ್ಣ ಟಿ. ಎಸ್., ಸಹಾಯಕರು | ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು. |
| 05 | ಎಂ.ಎಸ್. ರೇವಣ್ಣ, ಗ್ರೂಪ್-ಡಿ | ಎ.ಪಿ.ಎಸ್.ಪಾಲಿಟೆಕ್ನಿಕ್, ಸೋಮನಹಳ್ಳಿ. |
| 06 | ಅರಸು ಹೆಚ್.ಆರ್ ಮೆಕಾನಿಕ್ | ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ,ಬೆಂಗಳೂರು. |

29/09/2021

**ಜಂಟಿ ನಿರ್ದೇಶಕರು (ಪರೀಕ್ಷೆ)**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು**

**ಇವರಿಗೆ,**

1..ಪ್ರಾಂಶುಪಾಲರು, ಕೆ.ವಿ.ಟಿ.ಪಾಲಿಟೆಕ್ನಿಕ್,ಚಿಕ್ಕಬಳ್ಳಾಪುರ, ಮುಂದಿನ ಕ್ರಮಕ್ಕಾಗಿ
2.ಪ್ರಾಂಶುಪಾಲರು, ಪಿ.ವಿ.ಪಿ.ಪಾಲಿಟೆಕ್ನಿಕ್,ಬೆಂಗಳೂರು, .ಮುಂದಿನ ಕ್ರಮಕ್ಕಾಗಿ
3.ಪ್ರಾಂಶುಪಾಲರು, ಎ.ಪಿ..ಎಸ್.ಪಾಲಿಟೆಕ್ನಿಕ್,ಬೆಂಗಳೂರು, ಮುಂದಿನ ಕ್ರಮಕ್ಕಾಗಿ
4. .ಪ್ರಾಂಶುಪಾಲರು., ಸರ್ಕಾರಿ ಪಾಲಿಟೆಕ್ನಿಕ್,ಬೆಂಗಳೂರು, ಮುಂದಿನ ಕ್ರಮಕ್ಕಾಗಿ
5.ಸಂಯೋಜನಾಧಿಕಾರಿಗಳು, ಇ-ಆಡಳಿತ, ವಿಭಾಗ-ಅಂತರ್ಜಾಲಕ್ಕೆ ಅಳವಡಿಸುವ ಸಲುವಾಗಿ
6.ಮೇಲ್ಕಂಡ ಸಿಬ್ಬಂದಿಯವರಿಗೆ ಪ್ರಾಂಶುಪಾಲರ ಮೂಲಕ.